6) ಕುಂದಾಪುರ 8.72 ಎಕರೆ
7) ಹಂಗಾರಕಟ್ಟಾ –
8) ಮಲ್ಪೆ –
9) ಮಂಗಳೂರು –
10) ಪಡುಬಿದ್ರೆ –
ಒಟ್ಟು 165.64 ಎಕರೆ

ಆ) ಕರ್ನಾಟಕ ರಾಜ್ಯದ ಚಿಕ್ಕ ಬಂದರುಗಳಲ್ಲಿ ಬಂದರು ಅಭಿವೃದ್ಧಿಗಾಗಿ ವಶಪಡಿಸಿಕೊಂಡ ಜಮೀನಿನಲ್ಲಿ ಬಂದರು ಕಾರ್ಯಕ್ಕೆ (ಚಟುವಟಿಕೆಗಳಿಗೆ) ಉಪಯೋಗಿಸಿಕೊಂಡು ಉಳಿದ ಜಮೀನಿನ ಬಂದರುವಾರು ವಿವರ ಈ ಕೆಳಗಿನಂತಿದೆ.

1) ಕಾರವಾರ 6.00 ಎಕರೆ
2) ಬೇಲೆಕೇರಿ –
3) ತದಡಿ –
4) ಹೊನ್ನಾವರ 33.17 ಎಕರೆ
5) ಭಟ್ಕಳ –
6) ಕುಂದಾಪುರ –
7) ಹಂಗಾರಕಟ್ಟಾ –
8) ಮಲ್ಪೆ –
9) ಮಂಗಳೂರು –
10) ಪಡುಬಿದ್ರೆ –
ಒಟ್ಟು 39.17 ಎಕರೆ

ಇ) ಖಾಸಗಿ ಒಡೆತನಕ್ಕೆ ಯಾವುದೇ ಬಂದರು ಭೂಮಿ ನೀಡಿರುವುದಿಲ್ಲ.

ಈ) ಕರ್ನಾಟಕ ರಾಜ್ಯದ ಚಿಕ್ಕ ಬಂದರುಗಳಲ್ಲಿ ಬಂದರು ಚಟುವಟಿಕೆಗಳ ಅಭಿವೃದ್ಧಿಯ ದೃಷ್ಟಿಯಿಂದ ಬಂದರು ಭೂಮಿಯನ್ನು ಗುತ್ತಿಗೆ/ಪರವಾನಿಗೆಯ ಮೇಲೆ ಬಂದರು ಬಳಕೆದಾರರಿಗೆ ವಾಣಿಜ್ಯಾತ್ಮಕ ಚಟುವಟಿಕೆಗಳಿಗೆ ಕರ್ನಾಟಕ ಬಂದರುಗಳ ಸರಕು ಹೇರಿಳಿಸುವ ನಿಯಮಗಳಿಗನುಗುಣವಾಗಿ ನೀಡಿದ್ದು ಇರುತ್ತದೆ. ರಾಜ್ಯದ ವಾಣಿಜಾತ್ಮಕ ಚಿಕ್ಕ ಬಂದರುಗಳಲ್ಲಿ ಮೀನುಗಾರಿಕಾ ಚಟುವಟಿಕೆಗಳು ನಿರಂತರವಾಗಿ ಯಾವುದೇ ಅಡ್ಡಿ ಆತಂಕವಿಲ್ಲದೇ ನಡೆಯುತ್ತಿದ್ದು ಮೀನುಗಾರಿಕಾ ವೃತ್ತಿಗೆ ಪೆಟ್ಟು ಬಿದ್ದ ಯಾವುದೇ ಪ್ರಸಂಗಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

5390(5787) ಶ್ರೀ ಲಾಲಾಜಿ ಆರ್. ಮೆಂಡನ್ (ಕಾಪು) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸಮುದ್ರ ಕೊರೆತಕ್ಕೆ ಕಲ್ಲು ಹಾಕುವ ಬದಲಿಗೆ ಮರಳು ಚೀಲ ಹಾಕಲು ಆದೇಶಿಸಿರುವ ಕಾರಣವೇನು;

ಆ) ಮರಳು ಚೀಲ ಸಿದ್ದ ಪಡಿಸಲು ಸಮುದ್ರ ಬದಿಯಲ್ಲಿ ತೆಗೆಯಲಾದ ಮರಳಿನ ಹೊಂಡಗಳಿಂದ ಸಮುದ್ರ ಕೊರೆತ ಹೆಚ್ಚಾಗುತ್ತದೆ ಎಂಬ ಸತ್ಯ ಸರ್ಕಾರದ ಗಮನಕ್ಕೆ ಬರಲಿಲ್ಲವೇ;

ಇ) ಸಮುದ್ರ ಕೊರೆತಕ್ಕೆ ತಡೆಗೋಡೆ ಕಾರ್ಯಕ್ಕೆ ಕಲ್ಲಿಗಿಂತ ಮರಳು ಆಗಬಹುದೆಂಬ ನಿಲುವು ಯಾವ ತಂತ್ರಾಂಶ ಆಧಾರದ ಮೇಲೆ ನಿರ್ಣಯಿಸಲಾಗಿದೆ:

ಈ) ಸಮುದ್ರ ಕೊರೆತಕ್ಕೆ ಖಾಯಂ ಆಗಿ ಮರವಂತೆಯಲ್ಲಿ ನಿರ್ಮಿಸಿದ ಹಾಗೆ ತಡೆಗೋಡೆ ರಚಿಸಲು ಸರ್ಕಾರ ಎಷ್ಟು ಸಮಯ ತೆಗೆದುಕೊಳ್ಳುತ್ತದೆ.

ಉ) ಮಹಾರಾಷ್ಟ್ರ ಸರ್ಕಾರ ನಿರ್ಮಿಸಿದ ತಡೆಗೋಡೆ ತಂತ್ರಾಂಶ ಕರ್ನಾಟಕದಲ್ಲಿ ಅಳವಡಿಸದಿರಲು ಕಾರಣವೇನು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಸಮುದ್ರ ಕೊರೆತ ಪ್ರತಿಬಂದಿಸಲು ರಚಿಸಿರುವ ತಾಂತ್ರಿಕ ಪರಿಣಿತರ ಸಮಿತಿಯ ಸಲಹೆಯಂತೆ ಮಳೆಗಾಲದಲ್ಲಿ ಆಗುವ ಸಮುದ್ರ ಕೊರೆತವನ್ನು ತುರ್ತಾಗಿ ತಡೆಗಟ್ಟಲು ಮರಳು ಚೀಲಗಳ ತಡೆಗೋಡೆ ನಿರ್ಮಿಸಲಾಗುತ್ತಿದೆ.

ಆ) ಮರಳು ಚೀಲ ಸಿದ್ದಪಡಿಸಲು ಸಮುದ್ರ ಬದಿಯಲ್ಲಿ ತೆಗೆಯಲಾದ ಮರಳಿನ ಹೊಂಡಗಳಿಂದ ಸಮುದ್ರಕೊರತೆ ಹೆಚ್ಚಾಗುವುದಿಲ್ಲ. ಬದಲಾಗಿ ಈ ಕ್ರಮದಿಂದ ಉಬ್ಬರ ಸಮಯದಲ್ಲಿ ಮರಳು ಶೇಖರಣೆಯಾಗಿ ಈ ಪ್ರದೇಶದಲ್ಲಿ ಮರಳು ದಂಡೆ ನಿರ್ಮಾಣವಾಗುತ್ತದೆ.

ಇ) ಮಳೆಗಾಲದಲ್ಲಿ ತೀವ್ರ ಸಮುದ್ರ ಕೊರೆತ ಸಂಭವಿಸುತ್ತಿರುವ ಸಂದರ್ಭದಲ್ಲಿ ಸಾರ್ವಜನಿಕರ ಜೀವ ಮತ್ತು ಆಸ್ತಿಪಾಸ್ತಿ ತುರ್ತಾಗಿ ಸಂರಕ್ಷಿಸುವ ಸಲುವಾಗಿ ಮಾತ್ರ ಮರಳಿನ ಚೀಲಗಳ ತಡೆಗೋಡೆ ತಾಂತ್ರಿಕ ಪರಿಣಿತರ ಸಮಿತಿಯ ಶಿಫಾರಸ್ಸಿನಂತೆ ನಿರ್ಮಿಸಲಾಗುತ್ತಿದೆ. ನಂತರ ಸೆಂಟ್ರಲ್ ವಾಟರ್ ಅಂಡ್ ಪವರ್ ರಿಸರ್ಚ್ ಸ್ಟೇಷನ್ ಪುಣೆ, ಹಾಗೂ ಕರ್ನಾಟಕ ಇಂಜಿನಿಯರಿಂಗ್ ರಿಸರ್ಚ್ ಸ್ಟೇಷನ್, ಮೈಸೂರು ಇವರು ಸ್ಥಳ ಪರಿಶೀಲನೆ ಮಾಡಿ ನೀಡುವ ವಿನ್ಯಾಸಗಳಂತೆ ಕಲ್ಲಿನಿಂದ ಶಾಶ್ವತ ತಡೆಗೋಡೆ ನಿರ್ಮಿಸಲಾಗುತ್ತಿದೆ.

ಈ) ನ್ಯಾಷನಲ್ ಕೋಸ್ಟಲ್ ಪ್ರೋಟೆಕ್ಷನ್ ಪ್ರೋಜೆಕ್ಟ್ (NCPP)ಅಡಿಯಲ್ಲಿ ಸುಮಾರು 48.875 ಕಿ.ಮೀ. ಅದ್ದಕ್ಕೆ ರಾಜ್ಯದ ಕರಾವಳಿಯ ವಿವಿಧ ಪ್ರದೇಶಗಳಲ್ಲಿ ಶಾಶ್ವತ ತಡೆಗೋಡೆ ನಿರ್ಮಿಸುವ ಪ್ರಸ್ತಾವನೆಯು ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. ಅನುಮೋದನೆಯ ನಂತರ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

ಉ) ಆಯಾ ಕಡಲ ತೀರದ ಪ್ರದೇಶಕ್ಕೆ ಅನುಗುಣವಾಗಿ ತಾಂತ್ರಿಕ ತಜ್ಞರು ನೀಡುವ ವಿನ್ಯಾಸದಂತೆ ತಡೆಗೋಡೆ ನಿರ್ಮಿಸಬೇಕಾಗಿರುತ್ತದೆ. ಸೆಂಟ್ರಲ್ ವಾಟರ್ ಅಂಡ್ ಪವರ್ ರಿಸರ್ಚ್ ಸ್ಟೇಷನ್ ಪುಣೆ ಹಾಗೂ ಕರ್ನಾಟಕ ಇಂಜಿನಿಯರಿಂಗ್ ರಿಸರ್ಚ್ ಸ್ಟೇಷನ್, ಮೈಸೂರು ಇವರು ನೀಡುವ ವಿನ್ಯಾಸಗಳಂತೆ ರಾಜ್ಯದಲ್ಲಿ ಶಾಶ್ವತ ತಡೆಗೋಡೆ ನಿರ್ಮಿಸಲಾಗುತ್ತಿದೆ.

5391(5788) ಶ್ರೀ ಲಾಲಾಜಿ ಆರ್. ಮೆಂಡನ್ (ಕಾಪು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೀಡಿ ಕಾರ್ಮಿಕರನ್ನು ಗುರುತಿಸಿದ ಹಾಗೆ ಮೀನುಗಾರಿಕಾ ಕಾರ್ಮಿಕರನ್ನು ಗುರುತಿಸುವ ಕಾರ್ಯ ಯಾವಾಗಿನಿಂದ ಪ್ರಾರಂಭಿಸಲಾಗುವುದು;

ಆ) ಬೀಡಿ ಕಾರ್ಮಿಕರಿಗೆ ಹಾಗೂ ಅವರ ಮಕ್ಕಳಿಗೆ ನೀಡುವ ವಿದ್ಯಾರ್ಥಿ ವೇತನ ಸಹಿತವಾಗಿ ಇತರ ಸೌಲಭ್ಯ ನೀಡಲು ಇರುವ ಅಡಚಣೆಯಾತ್ಮಕ ತೊಂದರೆಯೇನು;